ಶ್ರೀ ಬಿ ಎಂ. ಪೊರಕೇರಿ.—ಸ್ವಾಮಿ, ದಿನ ನಿತ್ಯ ದನಗಳನ್ನು ಒಂದೇ ಕಡೆ ಮೇಯಿಸುವುದರಿಂದ ಅಲ್ಲಿ ಸರಿಯಾದ ಮೇವು ಸಿಕ್ಕುವುದಿಲ್ಲ, ಆದ್ದರಿಂದ ಬೇರೆ ಬೇರೆ ಕಂಪಾರ್ಟ್‌ಮೆಂಟ್ ಮಾಡಿ ದಿನ ಒಂದಕ್ಕೆ ಒಂದೊಂದು ಜಾಗ ಕೊಟ್ಟರೆ, ಹೆಚ್ಚು ಮೇವು ಬೆಳೆಸಲಿಕ್ಕೆ ಸಾಧ್ಯವಾಗುತ್ತದೆ, ಆ ರೀತಿ ಮಾಡುವುದಂ ಸೂಕ್ತವಲ್ಲವೇ ?

ಶ್ರೀ ಎನ್ ಹುಚ್ಚಮಾಸ್ತಿಗೌಡ.—ಅಧ್ಯಕ್ಷರೇ, ಮಾನ್ಯ ಸದಸ್ಯರು ಗೋಮಾಳ ಯಾವರೀತಿ ಅಭಿವೃದ್ಧಿ ಮಾಡಬೇಕು ಎಂಬ ಬಗ್ಗೆ ಪ್ರಶ್ನೆ ಕೊಳ್ಳುತ್ತಿದ್ದಾರೆ, ಈ ಸಂದರ್ಭದಲ್ಲಿ ಹೇಗೆ ಅಭಿವೃದ್ಧಿ ಮಾಡಬೇಕು ಎನ್ನುವ ಬಗ್ಗೆ ಉತ್ತರ ಹೇಳುವುದಕ್ಕಾಗುವುದಿಲ್ಲ, ಅದಕ್ಕೆ ಪ್ರತ್ಯೇಕ ಪ್ರಶ್ನೆ ಕಳಂಹಿಸಿದರೆ, ಅದನ್ನು ಯಾವರೀತಿ ಮಾಡಬೇಕು ಎಂಬ ಬಗ್ಗೆ ತಜ್ಞರಿಂದ ಸಲಹೆ ಪಡೆದು ಉತ್ತರ ಕೊಡುವುದಕ್ಕೆ ಆಗುತ್ತದೆ.

ಶ್ರೀ ಸಿ. ಬೈರೇಗೌಡ.—ಸ್ವಾಮಿ, ಈಗ ಲ್ಯಾಂಡ್ ಗ್ರಾಂಟ್ಸ್ ರೂಲ್ಸ್ ಪ್ರಕಾರ ಮಂಜೂರು ಮಾಡಿದ್ದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದಿರಿ, ಈಗ ಅವರಿಗೆ ಎವಿಕ್ಷನ್ ಮಾಡದರೀತಿಯಲ್ಲಿ ರಕ್ಷಣೆ ಕೊಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಎವಿಕ್ಷನ್ ಮಾಡುವಾಗ ಅಂತಹವರಿಗೆ ಮಾಡಿ, ಇಂತಹವರಿಗೆ ಮಾಡಬೇಡಿ ಎಂದು ಹೇಳುವುದಕ್ಕಾಗುವುದಿಲ್ಲ. ಎಲ್ಲರದನ್ನು ಎವಿಕ್ಟ್ ಮಾಡಿಸಬೇಕು, ನಂತರ ಲ್ಯಾಂಡ್ ಗ್ರಾಂಟ್ಸ್ ರೂಲ್ಸ್ ಪ್ರಕಾರ ನೋಡಿಸಬೇಕಾಗುತ್ತದೆ.

SRI M. M. KHARGE.—In Gulbarga Division nearly 90 per cent Scheduled Caste people are cultivating the grazing land and as per the recent notification of Government thousands of those S. Cs and S. Ts peope have been evicted and nearly lakhs of rupees worth of crops have been destroyed by the Revenue Officers. May I know the steps the Government is going to take to safeguard the interests of such cultivators who are cultivating the land since 1958 till to-date ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದರಿಂದ ನನಗೆ ಆಶ್ಚರ್ಯವಾಗುತ್ತದೆ, ಇರತಕ್ಕಂತಹ ಬೆಳೆಯನ್ನು ಹಾಳುಮಾಡಿ ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಂಡಿದ್ದಾರೆ ಎಂದು ಹೇಳಿದರೆ ನಮ್ಮ ಅಧಿಕಾರಿಗಳು ಇಷ್ಟು ದಕ್ಷತೆಯಿಂದ ಕೆಲಸ ಮಾಡಿ ಈ ರೀತಿ ಮಾಡಿದ್ದಾರೆ ಎಂದು ನನಗೆ ನಂಬಿಕೆ ಹುಟ್ಟುವುದಿಲ್ಲ. ಒಂದು ಪಕ್ಷ ಆ ರೀತಿ ಆಗಿದ್ದರೆ ಕೂಡಲೇ ಎಲ್ಲೆಲ್ಲಿ ಆಪ್ಶೆಲಬಲ್ ಇದೆ, ಕೊಡಲಕ್ಕೆ ಸಾಧ್ಯ ಇದೆ, ಅಂತಹ ಕಡೆ ಕೂಡಲೇ ವ್ಯವಸ್ಥೆ ಮಾಡಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದ್ದೇವೆ. ಒಂದೆರಡು ತಿಂಗಳೊಳಗೆ ರ್ಯಾಂಡ್ ಗ್ರಾಂಟ್ಸ್ ಕಮಿಟಿ ಕರೆದು ಅವರ ಮುಖಾಂತರ ಹಂಚಿಕೆ ಮಾಡಬೇಕೆಂದು ತಿಳಿಸಿದ್ದೇವೆ.

MADAM SPEAKRR.—Question No : 880 and 823 are held one.

Repairs to Bangalore Gulbarga Road

837. SRI M. M. KHARGE (Gurmitakal).—Will the Minister for Public Works pleased to state.—

(*a*) Whether Government are aware that the Bangalore-Gulbarga Road *via* Bellary, Siruguppa, Sindhnoor and Lingasugar is in a very bad condition;

(*b*) if so, the action Government intend to take to repair this road and when ?

SRI S. B. NAGARAL (Minister for state for Minor Irrigation) on behalf of.—

SRI H. M. CHANNABASAPPA (Minister for Public Works).—

(*a*) No Some portions were damaged due to heavy rains and floods during 1975 monsoon.

(*b*) The damaged portions of the road during 1975 monsoon have been repaired . Taking up of further improvements and recarpetting will be examined depending on the availability of funds.

SRI M. M. KHARGE.—Is the Government not aware that the Bangalore-Bellary-Gulbarga road is not in good condition. ?

† ಶ್ರೀ ಎಸ್. ಬಿ. ನಾಗರಾಳ್.—ಭಾರಿ ಮಳೆ ಹಾಗೂ ಪ್ರವಾಹಗಳಿಂದಾಗಿ ರಸ್ತೆಯ ಕೆಲವು ಭಾಗಗಳಲ್ಲಿ ಹಾನಿಯುಂಟಾಗಿದೆ ಎಂದು ಪ್ರಶ್ನೆಗೆ ಉತ್ತರ ಹೇಳಿದ್ದೇವೆ.

SRI M. M. KHARGE.—If so, what is the total length of the road that is in bad condition and what is the total amount spent for its repair ?

ಶ್ರೀ ಎಸ್. ಬಿ. ನಾಗರಾಳ್.—ಈಗ ಎಷ್ಟು ಮೈಲಿ ರಸ್ತೆ ಕೆಟ್ಟಿದೆ, ಅದಕ್ಕೆ ಅಲಾಟ್‌ಮೆಂಟ್ ಎಷ್ಟು ಎನ್ನುವ ಬಗ್ಗೆ ಪ್ರತ್ಯೇಕವಾದ ಪ್ರಶ್ನೆ ಹಾಕಬೇಕಾಗುತ್ತದೆ. ಈಗ ಡಿಪಾರ್ಟ್‌ಮೆಂಟಿನಿಂದ ತಿಳಿದ ಪ್ರಕಾರ ಎಷ್ಟೆಷ್ಟು ಹಣ ಒದಗುತ್ತದೆ ಅಷ್ಟನ್ನು ಪ್ರಿಯಾರಿಟಿ ಬೆಸಿಸ್ ಮೇಲೆ ರಿಪೇರಿ ಮಾಡಬೇಕು ಎಂದು ಈಗಾಗಲೇ ಸ್ಟೇಟ್ ಹೈವೇಸ್‌ನಲ್ಲಿ 4500 ಕೆಲಸಗಳಿಗೆ ಖರ್ಚು ಮಾಡುವುದಕ್ಕೆ ಮೇಜರ್ ಡಿಸ್ಟ್ರಿಕ್ಟ್ 1600 ಇದ್ದುದನ್ನು 2500 ತೆಗೆದುಕೊಂಡಿದ್ದೇವೆ. ಅದರ್ಸ್ 1000 ಇದ್ದುದನ್ನು 2000 ಮಾಡಿದ್ದೇವೆ. ಹೀಗೆ ಪ್ರಿಯಾರಿಟಿ ಮೇಲೆ ಹಣದ ಸೌಲಭ್ಯ ನೋಡಿಕೊಂಡು ಮಾಡುತ್ತೇನೆ,

SRI M. M. KHARGE.—I have specifically requested the Gevernment to let me know, out of the 600 kms. of the road, how many kms. have been damaged due to heavy rains of monsoons in 1957 and how many kms. have been repaired and what is che amount spent for that ?

SRI S. B. NAGARAL.—'What is the amount spent for that' ಎಂದು ಪ್ರಶ್ನೆ ಇಲ್ಲ, ಪ್ರಶ್ನೆ ಇರುವುದು ಬಳ್ಳಾರಿ. ಶಿರಗುಪ್ಪ, ಸಿಂಧನೂರು, ಹಾಗೂ ಲಿಂಗಸೂರು ಮಾರ್ಗವಾಗಿ ಬೆಂಗಳೂರು ಗುಲ್ಬರ್ಗಾದ ರಸ್ತೆಯು ಅತಿ ದುಸ್ಥಿತಿಯಲ್ಲಿರುವುದು ಸರ್ಕಾರದವರಿಗೆ ಗೊತ್ತಿದೆಯೇ' ಎಂದು ಇದೆ ಅದಕ್ಕೆ ಎತ್ತರವಾಗಿ ಸ್ವಲ್ಪ ಹೆಚ್ಚು ಮಳೆ ಹಾನಳಿಯಿಂದ ಕೆಲವು ರಸ್ತೆಗಳು ದುಸ್ಥಿತಿಗೊಳಗಾಗಿವೆ ಎಂದು ಉತ್ತರದಲ್ಲಿ ಹೇಳಿದ್ದೇವೆ. ಮಾನ್ಯ ಸದಸ್ಯರು ಅದಕ್ಕೆ ಧುಡ್ಡು ಖರ್ಚಾಗಿದೆ ಜಂದು ಕೇಳುವುದಾದರೆ ಅದರ ಬಗ್ಗೆ ಪ್ರತ್ಯೇಕ ಪ್ರಶ್ನೆ ಕಳುಹಿಸಬೇಕು.

MADAM SPEKER.—Now questions are,